ಓ. ಎಸ್. ನಂಬರ:-70/2022

ಡಿ.ಡಬ್ಲೂ-:-1 : ಸಹದೇವಪ್ಪ ತಂದೆ ಕಾಶೀರಾಯ ಗರೂರ

ದಿನಾಂಕ:- 24-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಶ್ರೀ ಎ ಎಸ್ ಕೆ ವಕೀಲರಿಂದ.

ಸರ್ವೆ ನಂಬರ ೭೮ ಕ್ಕೆ ಸಂಬಂಧಪಟ್ಟಂತೆ ಮಲ್ಲೇಶಪ್ಪ ಮತ್ತು ಇತರರು ಎ ಸಿ ರವರ ಹತ್ತಿರ ಅಪೀಲು ಮಾಡಿದ್ದರು ಎಂದರೆ ಸರಿ. ಸದರಿ ಅಪೀಲಿನ ಕುರಿತು ನನಗೆ ಮಾಹಿತಿ ಇತ್ತು ಎಂದರೆ ಸರಿ. ಸದರಿ ಅಪೀಲು ವಜಾಗೊಂಡಿತ್ತು ಎಂದರೆ ಸರಿ. ಸದರಿ ಆದೇಶದ ಮೇಲೆ ಡಿ ಡಿ ಎಲ್ ಆರ್ ರವರ ಹತ್ತಿರ ಅಪೀಲು ಮಾಡಲಾಗಿತ್ತು ಎಂದರೆ ಸರಿ. ಡಿ ಡಿ ಎಲ್ ಆರ್ ರವರು ವಾದಿ ಲಕ್ಷ್ಮಣರವರಂತೆ ಆದೇಶ ಮಾಡಿದ್ದರು ಎಂದರೆ ಸರಿಯಲ್ಲ. ದಿನಾಂಕ 23-07-2018 ರಂದು ವಾದಿ ಲಕ್ಷ್ಮಣರವರಂತೆ ಆದೇಶ ಆಗಿದೆ ಎಂದರೆ ಸರಿಯಲ್ಲ.

೨. ೧೯೬೮ ರಲ್ಲಿ ನನ್ನ ತಾತನಾದ ಸಹದೇವಪ್ಪ ಕಲಬುರಗಿ ನ್ಯಾಯಾಲಯದಲ್ಲಿ ಕೇಸು ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕೇಸು ವಜಾಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತ ಸಹದೇವಪ್ಪರವರು ಮಾಡಿದ ಅಪೀಲೂ ಕೂಡಾ ವಜಾ ಆಗಿದೆ ಎಂದರೆ ಸರಿಯಲ್ಲ. ನನ್ನ ತಾತ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಮಾಡಿದ ಅಪೀಲೂ ಕೂಡಾ ೧೯೭೬ ರಲ್ಲಿ ವಜಾಗೊಂಡಿದೆ ಎಂದರೆ ಸರಿಯಲ್ಲ. ಸರ್ವೆನಂಬರ ೭೮ ರಲ್ಲಿ ೧೧ ಎಕರೆ ೨೭ ಗುಂಟೆ

ಜಮೀನನ್ನು ಲಕ್ಷ್ಮಣ, ಮಲ್ಲೇಶಪ್ಪ ಮತ್ತು ದತ್ತಪ್ಪರವರು ಸ್ವಾಧೀನದಲ್ಲಿದ್ದು, ಅವರೆ ಸದರಿ ಜಮೀನಿನ ಉಪಭೋಗ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಲಕ್ಷ್ಮಣ ಮತ್ತು ಇತರರ ಜಮೀನನ್ನು ಅತೀಕ್ರಮಣ ಮಾಡಲು ನಾವು ಪ್ರಯತ್ನ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ. ದಿನಾಂಕ 10-03-2022 ರಂದು ನಾವು ವಾದಿಯರಿಗೆ ಹೊಡೆ-ಬಡೆ ಮಾಡಿ ಅವರ ಜಮೀನನ್ನು ಕಸಿದುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

೩. ನಾವು ವಾದಿಯರ ಜಮೀನಿನಲ್ಲಿನ ಬೇವಿನ ಗಿಡಗಳನ್ನೂ ಕೂಡಾ ಕಡಿದಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ಜಮೀನಿನಲ್ಲಿನ ಗಿಡಗಳನ್ನು ನಾವು ಕಡಿದಿರುತ್ತೇವೆ ಎನ್ನುತ್ತಾರೆ. ವಾದಿಯರ ಬೋರವೇಲ್ ಕೂಡಾ ನಾವು ವಶಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಬೋರವೇಲ್ ನಾವು ಹೊಡೆದಿದ್ದು ಇರುತ್ತದೆ ಎನ್ನುತ್ತಾರೆ. ಬೋರವೇಲ್ ಕುರಿತಾದ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ನಾವು ವಾದಿಯರ ಜಮೀನಿನಿಂದಲೆ ಗಿಡಗಳನ್ನು ಕಡಿದಿರುತ್ತೇವೆ ಎಂದರೆ ಸರಿಯಲ್ಲ. ವಾದಿ ಲಕ್ಷ್ಮಣರವರು ಅರಣ್ಯ ಇಲಾಖೆಗೆ ಗಿಡ ಕಡಿದ ವಿಚಾರವಾಗಿ ನನ್ನ ಮೇಲೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಅಣ್ಣನ ಮೇಲೆ ನ್ಯಾಯಾಲಯದಲ್ಲಿ ಕ್ರಿಮಿನಲ್ ಕೇಸು ನಡೆದಿದೆ ಎಂದರೆ ಸರಿ. ಸಾಕ್ಷಿಯು ಅವರು ಸುಳ್ಳು ಕೇಸು ಮಾಡಿರುತ್ತಾರೆ ಎನ್ನುತ್ತಾರೆ.

೪. ದಿನಾಂಕ 21-06-2025 ರಂದು ಸರ್ವೆ ಇಲಾಖೆಯವರು ಅಳತೆ ಮಾಡಲು ಬಂದಾಗ ಕೂಡಾ ನಾನು ಅವರ ಜೊತೆ ಜಗಳ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅವರೆ ಮಳೆ

ಬಂದಿದ್ದರಿಂದ ಬಿಟ್ಟುಹೋಗಿರುತ್ತಾರೆ ಎನ್ನುತ್ತಾರೆ. ನಾನು ಮತ್ತು ನನ್ನ ಅಣ್ಣ ಅಳತೆ ಕೆಲಸಕ್ಕೆ ತೊಂದರೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ ನಂಬರ ೭೮ ರ ಪೂರ್ತಿ ಜಮೀನನ್ನು ಸರ್ವೆಯರ್ ಅಳತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ರಸ್ತೆಯನ್ನು ಬಿಟ್ಟು ಅಳತೆ ಮಾಡಿರುತ್ತಾರೆ ಮತ್ತು ಸದರಿ ರಸ್ತೆ ನಮ್ಮ ಜಮೀನಿನಲ್ಲಿ ಇರುತ್ತದೆ ಎನ್ನುತ್ತಾರೆ. ನನಗೆ ೪ ಎಕರೆ ೨೭ ಗುಂಟೆ ಜಮೀನು ಮಾತ್ರ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ೬ ಎಕರೆ ೪ ಗುಂಟೆ ನಮ್ಮ ತಾತನ ಕಾಲದಿಂದ ನಮಗೆ ಜಮೀನು ಇದೆ ಎನ್ನುತ್ತಾರೆ.

೫. ನಮಗೆ ೪ ಎಕರೆ ೨೭ ಗುಂಟೆ ಜಮೀನು ಮಾತ್ರ ಇದ್ದರೂ ಕೂಡಾ ನಾವು ೨೦೨೨ ರಿಂದ ೭ ಎಕರೆ ೨೬ ಗುಂಟೆ ಜಮೀನು ರಸ್ತೆ ಹಿಡಿದು ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ನಾವು ೬ ಎಕರೆ ೪ ಗುಂಟೆ ಜಮೀನಿನ ಸ್ವಾಧೀನದಲ್ಲಿರುತ್ತೇವೆ ಎನ್ನುತ್ತಾರೆ. ಸ್ಟೇಷನ್ ಗಾಣಗಾಪೂರದಿಂದ ಚೌಡಾಪೂರ ರಸ್ತೆ ನಮ್ಮ ಜಮೀನಿನಲ್ಲಿ ಹಾದುಹೋಗಿರುತ್ತದೆ. ಸದರಿ ರಸ್ತೆಗೆ ವಾದಿಯರ ೭ ಗುಂಟೆ ಜಮೀನು ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ನಮಗೆ ಈಗ ೧೧ ಎಕರೆ ೨೭ ಗುಂಟೆ ಜಮೀನು ಇದ್ದರೂ ಸಹ ವಾದಿಯರ ಜಮೀನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.